15. ಕೊಯ್ಲೋತ್ತರ ನಿರ್ವಹಣೆ. Post Harvest Management.

16. ಮಾರುಕಟ್ಟೆ ಅಭಿವೃದ್ಧಿ. Establishment of Market infrastructure

17. ಹೊಸ ಅನ್ವೇಷಣೆ. Innovative Components.

ಅ) 2005–06 ನೇ ಸಾಲಿನಿಂದ ಇಲ್ಲಿಯವರೆಗೆ ಒಟ್ಟು ರೂ. 420.13 ಕೋಟಿಗಳು.

From 2005-06 to till now Rs. 420.13 Crores.

ಇ) ರೂ.39.98 ಕೋಟಿಗಳು.

Rs.39.98 Crores.

ಈ) ಹೌದು. ಕ್ಷೇತ್ರವಾರು ವಿವರ ಈ ಕೆಳ ಕಂಡಂತಿದೆ.

Yes. Constituency wise details given below.

ಕ್ರ ಸಂ.	ಕ್ಷೇತ್ರ	ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ)
1	ಮಂಗಳೂರು	273.06
2	ಬೆಳ್ತಂಗಡಿ	353.12
3	ಸುಳ್ಯ	298.44
4	ಪುತ್ತೂರು	354.35
5	ಬಂಟ್ವಾಳ	462.60
	ಒಟ್ಟು	1741.57

ಪರಿಸರ ಮಾಲಿನ್ಯ

994 (1516) ಶ್ರೀ ಖಾದರ್ ಯು.ಟಿ. (ಮಂಗಳೂರು) : ಮಾನ್ಯ ಜೀವಿಶಾಸ್ತ್ರ, ಪರಿಸರ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇತ್ತೀಚೆಗೆ ಪರಿಸರ ಮಾಲಿನ್ಯ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಯಾವ್ಯಾವ ಸಕ್ಟರ್‌ನಲ್ಲಿ ವಾಯು ಮತ್ತು ಪರಿಸರ ಮಾಲಿನ್ಯ ಆಗುತ್ತಿದೆ (ವಿವರ ನೀಡುವುದು);

ಇ) ಈ ರೀತಿಯ ಪರಿಸರ ಮಾಲಿನ್ಯ ಮಾಡುತ್ತಿರುವವರ ಬಗ್ಗೆ ಯಾವ ರೀತಿಯ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ?

ಶ್ರೀ ಜೆ. ಕೃಷ್ಣ ಪಾಲೇಮಾರ್ (ಜೀವಿಶಾಸ್ತ್ರ, ಪರಿಸರ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು) :

ಅ) ಹೌದು, ಸರ್ಕಾರದ ಗಮನಕ್ಕೆ ಬಂದಿದೆ.

ಆ) ಕೈಗಾರಿಕಾ ವಲಯ, ಮೂಲಭೂತ ಸೌಕರ್ಯಗಳು, ಘನ ತ್ಯಾಜ್ಯ ವಸ್ತುಗಳು, ಗಣಿಗಾರಿಕೆ ಹಾಗೂ ಹೆಚ್ಚುತ್ತಿರುವ ವಾಹನಗಳ ಸಂಖ್ಯೆ ವಾಯು ಮತ್ತು ಪರಿಸರ ಮಾಲಿನ್ಯ ಹೆಚ್ಚಳಕ್ಕೆ ಪ್ರಮುಖ ಕಾರಣಗಳಾಗಿರುತ್ತದೆ.

ಇ) ಉದ್ದಿಮೆ ಹಾಗೂ ಇತರೆ ಚಟುವಟಿಕೆಗಳಿಗೆ ಜಲ ಹಾಗೂ ವಾಯು ಕಾಯ್ದೆಯಡಿಯಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನೀಡುತ್ತಿರುವ ಪರವಾನಿಗೆಗಳಲ್ಲಿ ಮಾಲಿನ್ಯ ನಿಯಂತ್ರಣಕ್ಕೆ ಸಂಬಂಧಿಸಿದ ಸೂಕ್ತ ಷರತ್ತುಗಳನ್ನು ವಿಧಿಸಲಾಗುತ್ತಿದೆ ಹಾಗೂ ಅವುಗಳ ಪಾಲನೆಯ ಕುರಿತು ಕಾಲಕಾಲಕ್ಕೆ ಪರಿವೀಕ್ಷಣೆ/ಮಾಪನ ಮಾಡಿ, ಉಲ್ಲಂಘನೆ ಕಂಡುಬಂದಲ್ಲಿ, ಕಾನೂನು ರೀತಿಯ ಕ್ರಮ ಜರುಗಿಸಲಾಗುತ್ತಿದೆ. ಕಾರ್ಖಾನೆ/ ಉದ್ದಿಮೆಗಳು ಕಾಯ್ದೆಯನ್ನು ಉಲ್ಲಂಘಿಸುತ್ತಿರುವುದು ವರದಿಯಾದಲ್ಲಿ ಅಂತಹವರ ವಿರುದ್ಧ ಮುಚ್ಚುವ ಆದೇಶ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಸಾರಿಗೆ ಇಲಾಖೆಯು ವಾಹನಗಳಿಂದ ಹೊರಸೂಸುವ ಹೊಗೆಯನ್ನು ನಿಯಂತ್ರಿಸುವ ಅಧಿಕಾರವನ್ನು ಮೋಟಾರು ವೆಹಿಕಲ್ಸ್ ಕಾಯ್ದೆಯಡಿ ಹೊಂದಿರುತ್ತದೆ.

ಲೆಕ್ಕ ಶೀರ್ಷಿಕೆ 5054 ರಡಿಯ ಅನುದಾನ

995 (1517) ಶ್ರೀ ಖಾದರ್ ಯು.ಟಿ. (ಮಂಗಳೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು ಈ ವರ್ಷ ಲೋಕೋಪಯೋಗಿ ರಸ್ತೆಗಳ: ಅಭಿವೃದ್ಧಿಗಾಗಿ ಮಂಜೂರು ಮಾಡಿದ ಹಣ ಎಷ್ಟು? ಇದರಲ್ಲಿ ಇಲ್ಲಿಯವರೆವಿಗೂ ವೆಚ್ಚ ಮಾಡಿದ ಹಣ ಎಷ್ಟು;